**ದಿನಾಂಕ 15-01-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ಪ್ರತಿವಾದಿ-1 ರಿಂದ 6, 8 ರಿಂದ 11 ರವರ ಪರವಾಗಿ**

1. 1986-87 ರಲ್ಲಿಯೇ ನಿಮ್ಮ ತಂದೆ, ಸಹೋದರರು ಮಂಟೂರ ಗ್ರಾಮದಲ್ಲಿ ಬಂದು ವಾಸವಿದ್ದರು ಎಂದರೆ ಸರಿ. ಹಂಗರಗಿ ಗ್ರಾಮದ ಜಮೀನುಗಳು ಕೃಷಿ ಯೋಗ್ಯವಲ್ಲ ಎಂದರೆ 1986-87 ರಲ್ಲಿ ಮಂಟೂರ ಗ್ರಾಮದಲ್ಲಿ ವಾಸಿಸಲು ನಿಮ್ಮ ತಂದೆ ಮತ್ತು ಸಹೋದರರು ಪ್ರಾರಂಭಿಸಿದರು ಎಂದರೆ ಪರಿಹಾರ ಮೊತ್ತ ತೆಗೆದುಕೊಂಡೆ ಮಂಟೂರು ಗ್ರಾಮದಲ್ಲಿ ಇದ್ದರು ಎಂದು ಹೇಳುತ್ತಾರೆ. ಹಂಗರಗಿ ಗ್ರಾಮದ ಜಮೀನುಗಳು ಅಪ್ಪಾಗಿ ಕೃಷಿ ಯೋಗ್ಯ ಜಮೀನುಗಳು ಅಲ್ಲ ಎಂದರೆ ಸರಿಯಲ್ಲ. ಹಂಗರಗಿನಲ್ಲಿನ ಮೂಲ ಆಸ್ತಿಗಳು ಖುಸ್ಕಿ ಜಮೀನುಗಳು ಎಂದು ಭೂ ಸ್ವಾಧೀನ ಐ ತೀರ್ಪಿನಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ಬರೆದಿದ್ದಾರೆ, ಸದರಿ ಪರಿಹಾರ ಮೊತ್ತದಿಂದ ಮಂಟೂರನಲ್ಲಿ ಜಮೀನು ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ನೀವು ನಿಮ್ಮ ವಾದ ಪತ್ರದಲ್ಲಿ ಯಾವ ಆಸ್ತಿಯನ್ನು ಯಾರಿಂದ ನಿಮ್ಮ ಪ್ರಕಾರ ಎಷ್ಟು ಮುಳುಗಡೆ ಮೊತ್ತ ಉಪಯೋಗಿಸಿ ಖರೀದಿಸಿದರುಎಂದು ವಾದ ಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಹಂಗರಗಿ ಗ್ರಾಮದಲ್ಲಿ ಪೂರ್ವಜರ ಆಸ್ತಿಗಳು ಇದ್ದವು ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ.

2. ಮಂಟೂರ ಗ್ರಾಮಕ್ಕೆ ಬಂದ ನಂತರ ನಿಮ್ಮ ತಂದೆ ಮತ್ತು ಸಹೋದರರು ಬೇರೆ ಗ್ರಾಮದ ಜಮೀನುಗಳಲ್ಲಿ ದುಡಿದಿದ್ದಾರೆ ಎಂದರೆ ದುಡಿದಿದ್ದಾರೆ ಹಾಗೂ ಪರಿಹಾರ ಮೊತ್ತದಿಂದ ಸಹಿತ ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ಮುಳುಗಡೆ ಪರಿಹಾರ ಮೊತ್ತ ಬರುವ ಪೂರ್ವದಲ್ಲಿ ದಾವಾ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಹಂಗರಗಿ ಗ್ರಾಮದ ಜಮೀನುಗಳು ವ್ಯವಸಾಯ ಯೋಗ್ಯ ಜಮೀನುಗಳು ಇರಲಿಲ್ಲ, ಆದ್ದರಿಂದ ಅದರಿಂದ ಯಾವುದೇ ಉತ್ಪನ್ನ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಂಟೂರ ಗ್ರಾಮದಲ್ಲಿನ ಆಸ್ತಿಗಳನ್ನು ನಿಮ್ಮ ತಂದೆ ಮತ್ತು ಸಹೋದರರು ಬೇರೆಯವರ ಅಸ್ತಿಗಳಲ್ಲಿ ದುಡಿದು ಬಂದ ಉತ್ಪನ್ನದಿಂದ ಸ್ವಯಾರ್ಜಿತವಾಗಿ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಬೇರೆಯವರ ಜಮೀನದಲ್ಲಿ ದುಡಿದಿಲ್ಲ, ಪರಿಹಾರ ಮೊತ್ತದಿಂದ ಖರೀದಿ ಹಿಡಿದರು ಎಂದು ಹೇಳುತ್ತಾರೆ. ಸದರಿ ವ್ಯವಸಾಯ ಜಮೀನುಗಳ ಅಭಿವೃದ್ಧಿಯನ್ನು ನಿಮ್ಮ ತಂದೆ ಮತ್ತು ಸಹೋದರರು ಸ್ವಂತ

ಆದಾಯದಿಂದ ಮಾಡಿದ್ದು ಅವರೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಮಂಟೂರ ಗ್ರಾಮದಲ್ಲಿ 2 ಲಕ್ಷ ರೂಪಾಯಿಗೆ ಯಾವುದೇ ಜಮೀನು ಖರೀದಿಸಲು ಸಾಧ್ಯ ಇಲ್ಲ ಎಂದರೆ ಆಗ ಜಮೀನುಗಳ ಬೆಲೆ ಕಡಿಮೆ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ದಾವೆಯ ಬಗ್ಗೆ ಯಾವುದೇ ಮಾಹಿತಿ ಬಗ್ಗೆ ಗೊತ್ತಿಲ್ಲದಿದ್ದರೂ, ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ